ಉಕ್ಕಿದ ಮನದಿಂದ ಕೊಟ್ಟ ವರುಣದೇವ ಮದು ।
ಮಕ್ಕಳಾಯುಷ್ಯವ ಬೆಳೆಸೆಂದ ॥ ೧೦೩ ॥

ಮತ್ತೆ ದೇವೇಂದ್ರಗೆ ಪಾರಿಜಾತವನಿತ್ತ ।
ಚಿತ್ತವ ಸೆಳೆವಪ್ಸರಸ್ತ್ರೀಯರ ॥
ಹತ್ತು ಸಾವಿರ ಕೊಟ್ಟ ವರುಣದೇವ ಹರಿ ।
ಭಕ್ತಿಯ ಮನದಲ್ಲಿ ಬೆಳೆಸೆಂದ ॥ ೧೦೪ ॥

ಪೊಳೆವ ನವರತ್ನದ ರಾಶಿಯ ತೆಗೆತೆಗೆದು ।
ಉಳಿದಮರರಿಗೆ ಸಲಿಸಿದ ॥
ಉಳಿದ ಅಮರರಿಗೆ ಸಲಿಸಿದ ಸಮುದ್ರ ।
ಕಳುಹಿಸಿದನವರವರ ಮನೆಗಳಿಗೆ ॥ ೧೦೫ ॥

ಉನ್ನತ ನವರತ್ನವಾದ ಅರಮನೆಯ ।
ಚನ್ನೇಮರಗಳಿಂದ ವಿರಚಿಸಿ ॥
ತನ್ನ ಅಳಿಯನಿಗೆ ಸ್ಥಿರವಾಗಿ ಮಾಡಿಕೊಟ್ಟು ।
ಇನ್ನೊಂದು ಕಡೆಯಡಿ ಇಡದಂತೆ ॥ ೧೦೬ ॥

ಹಯವದನ ತನ್ನ ಪ್ರಿಯಳಾದ ಲಕ್ಷ್ಮಿಗೆ ।
ಜಯವಿತ್ತ ಕ್ಷೀರಾಂಬುಧಿಯಲ್ಲಿ ॥
ಜಯವಿತ್ತ ಕ್ಷೀರಾಂಬುಧಿಯಲ್ಲಿ ಶ್ರೀಕೃಷ್ಣ ।
ದಯದಿ ನಮ್ಮೆಲ್ಲರ ಸಲಹಲಿ ॥ ೧೦೭ ॥

ಈ ಪದವ ಮಾಡಿದ ವಾದಿರಾಜಮುನಿಗೆ ।
ಶ್ರೀಪತಿಯಾದ ಹಯವದನ ॥
ತಾಪವ ಕಳೆದು ತನ್ನ ಶ್ರೀಚರಣದ ಸ ।
ಮೀಪದಲ್ಲಿಟ್ಟು ಸಲಹಲಿ ॥ ೧೦೮ ॥

ಇಂತು ಸ್ವಪ್ನದಲ್ಲಿ ಕೊಂಡಾಡಿಸಿಕೊಂಡ ಲಕ್ಷ್ಮೀ ।
ಕಾಂತನ ಕಂದನೆನಿಸುವ ॥
ಸಂತರ ಮೆಚ್ಚಿನ ವಾದಿರಾಜೇಂದ್ರ ಮುನಿ ।
ಪಂಥದಿ ಪೇಳಿದ ಪದವಿದು ॥ ೧೦೯ ॥

ಶ್ರೇಯರಸ ಹಯವದನಪ್ರಿಯ ವಾದಿರಾಜ ।
ರಾಯ ರಚಿಸಿದ ಪದವಿದು ॥
ಆಯುಷ್ಯ ಭವಿಷ್ಯ ದಿನದಿನಕೆ ಹೆಚ್ಚುವುದು ನಿ ।
ರಾಯಾಸದಿಂದ ಸುಖಿಪರು ॥ ೧೧೦ ॥

ಬೊಮ್ಮಾನ ದಿನದಲ್ಲಿ ಒಮ್ಮೊಮ್ಮೆ ಈ ಮದುವೆ ।
ಕ್ರಮ್ಮದಿ ಮಾಡಿ ವಿನೋದಿಸುವ ॥
ನಮ್ಮ ನಾರಾಯಣಗೂ ಈ ರಮ್ಮೆಗಡಿಗಡಿಗೂ ।
ಅಸುರ ಮೋಹನವೇ ನರನಟನೆ ॥ ೧೧೧ ॥

ಮದುವೆಯ ಮನೆಯಲ್ಲಿ ಈ ಪದವ ಪಾಡಿದರೆ ।
ಮದುಮಕ್ಕಳಿಗೆ ಮುದವಹುದು ॥
ವಧುಗಳಿಗೆ ಓಲೇಭಾಗ್ಯ ದಿನದಿನಕೆ ಹೆಚ್ಚುವುದು ।
ಮದನನಯ್ಯನ ಕೃಪೆಯಿಂದ ಶೋಭಾನೆ ॥ ೧೧೨
॥

ಶೋಭಾನವೆನ್ನಿರೆ ಸುರರೊಳು ಸುಭಗನಿಗೆ ।
ಶೋಭಾನವೆನ್ನೀ ಸುಗುಣನಿಗೆ ॥
ಶೋಭಾನವೆನ್ನಿರೆ ತ್ರಿವಿಕ್ರಮರಾಯಗೆ ।
ಶೋಭಾನವೆನ್ನೀ ಸುರಪ್ರಿಯಗೆ ॥ ಶೋಭಾನೆ ॥
೧೧೩ ॥

॥ ಮಂಗಳಂ ॥